ಕಡೂರು ಡಿಸ್ಟ್ರಿಕ್ಟು.

ನೋಟಿಸ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕಡೂರು ಡಿಸ್ಟ್ರಿಕ್ಟು ತರೀಕರೆ ತಾಲ್ಲೂಕು ತರೀಕೆರೆ ಕಸಬಾ ಮೂರ್ಕಟ್ಟನಲ್ಲಿ ಸ್ಯ 1903ನೇ ಇಸವಿ ಜುಲೈ 1ರ ಲಾಗಾಯಿತು ಸ್ಯ 1904ನೇ ಇಸವಿ ಜೂನ್ ಆಖೈರು ವರಿಗೆ ತೆರಿಗೆ ವಸೂಲ್ಮಾಡುವ ಹಕ್ಕುದಾರಿಯನ್ನು ತರೀಕರೆ ತಾಲ್ಲೂಕು ಕಚೇರಿಯಲ್ಲಿ ಆ ತಾಲ್ಲೂಕು ಅಮಲ್ದಾರ್ರವರಿಂದ ಸ್ಯ 1903ನೇ ಇಸವಿ ಜೂನ್ 22ನೇ ಸೋಮವಾರ ದಿವಿ 11 ಘಂಟೆಗೆ ಸರಿಯಾಗಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಪಡಿಯತಕ್ಕವರು ಸಂತೆಯ ದಿವಸ ಮೂರ್ಕಟ್ಟಿನ ಸರಹದ್ದಿನ ವಳಗೆ ತರಲ್ಪಡುವ ಇದರ ಕೆಳಗೆ ನಮೂದು ಮಾಡಿರುವ ಷೆಡ್ಯೂಲಿನಲ್ಲಿ ಕಂಡ ದರದಂತೆಯೆ ಗಾಡಿ ಮತ್ತು ಜಾನ್ವಾರು "ವಗೈರೆ" ಗಳ ಮೇಲೆ ಫೀ ವಸೂಲ್ ಮಾಡತಕ್ಕದ್ದು. ಸದರೀ ದರಕ್ಕಿಂತ ಜಾಸ್ತಿ ದರ ವಸೂಲು ಮಾಡಕೂಡದು.

3. ಈ ಹರಾಜು ಕಡೂರು ಡಿಸ್ಟ್ರಿಕ್ಟು ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರವರ ಮಂಜೂರಾತಿಗೆ ವಳಪಟ್ಟಿರುತ್ತೆ. ಸದರೀ ಯವರು ಎಲ್ಲಾ ದರಖಾಸ್ತುಗಳಿಗಿಂತ ಜಾಸ್ತಿಯಾದ ಅಥವಾ ಇನ್ಯಾವ ದರಖಾಸ್ತುಗಳನ್ನ ಅಂಗೀಕರಿಸುವದಕ್ಕೆ ಆಗಲಿ ಅಥವಾ ಯಾವ ಸಬಬನ್ನೂ ತೋರಿಸದೆ ತಿರಸ್ಕರಿಸುವದಕ್ಕೆ ಆಗಲಿ ಅಧಿಕಾರ ಉಳ್ಳವರಾಗಿರುತ್ತಾರೆ.

4. ಕಂಟ್ರಾಕ್ಟುದಾರನು ಗುತ್ತಾ ಮೊಬಲಗನ್ನು ಹನ್ನೆರಡು ತಿಂಗಳ ಸಮಕಂತು ಪ್ರಕಾರ ವಸೂಲು ಕೊಡತಕ್ಕದ್ದು. ಪ್ರತಿ ಮಾಹೆಯ ಕಂತನ್ನು ಆ ಮಾಹೆ ಆಖೈರಾದ ತಾರೀಖು 10ರ ವಳಗೆ ವಸೂಲ ಕೊಟ್ಟು ರಶೀದಿ ಪಡಿಯತಕ್ಕದ್ದು.

5. ಹರಾಜು ಖೈದಾದ ಕೂಡ್ಲೆ ಆಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳು ಬಾಬತು ಕಂಟ್ರಾಕ್ಟು ಯಾ ಕಂತು ಮೊಬಲಗನ್ನು ಡಿಪಾಜಿಟ್ಟಿನಲ್ಲಿಡಬೇಕು. ಕಂಟ್ರಾಕ್ಟು ಷರತ್ತುಗಳ ಮೇರೆ ಸರಿಯಾಗಿ ನಡದುಕೊಂಡರೆ ಡಿಪಾಜಿಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹಗಳ ಕಂತು ಬಗ್ಗೆ ವಸೂಲ ಕೊಡುತ್ತೆ.

6. ಹರಾಜು ಖೈದಾದ ಕೂಡ್ಲೆ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡದೆ ಇದ್ದರೆ ಹರಾಜು ಹಕ್ಕುದಾರಿಯನ್ನು ಪುನಹ ಹರಾಜು ಮಾಡುತ್ತೆ. ಎರಡನೆ ಹರಾಜಿನಿಂದ ಸರ್ಕಾರಕ್ಕೆ ಉಂಟಾಗಬಹುದಾದ ಲುಕ್ಸಾನಿಗೆ ಮುರು ಕಂಟ್ರಾಕ್ಟುದಾರ ಯಾ ಹರಾಜುದಾರನನ್ನು ಗುರಿಪಡಿಸುತ್ತೆ.

7. ಪ್ರತಿ ಮಾಹೆಯಲ್ಲೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ವಳಗಾಗಿ ವಸೂಲ ಕೊಡಲು ತಪ್ಪಿದರೆ ಪಾವತೀ ಮಾಡಬೇಕಾಗಿರುವ ಮೊಬಲಗಿನ ಮೇಲೆ ಪಾವತೀ ಮಾಡುವ ತಾರೀಖಿನ ವರಿಗೆ ಮಾಹೆಯಾನಾ ರೂಪಾಯಿ ಬಂದಕ್ಕೆ ಬಂದು ಪೈನಂತೆ ಬಡ್ಡಿ ಶೇರಿಸಿ ಖಿಸ್ತು ಮೊಬಲಗನ್ನು ವಸೂಲ ಮಾಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಮ್ಯುನಿಸಿಪಲ್ ಪ್ರೆಸಿಡೆಂಟರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಮುರು ಕಂಟ್ರಾಕ್ಟುದಾರನನ್ನು ಗುರಿಪಡಿಸಿ ಹರಾಜು ಮಾಡಲ್ಪಡುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರೀ ನಫೆಗೆ ಹಕ್ಕುದಾರನಾಗಿರುವದಿಲ್ಲ.

8. ಕಂಟ್ರಾಕ್ಟುದಾರನು ಪ್ರತಿ ಸಂತೆಯಲ್ಲಿಯೂ ವಸೂಲಾಗುವ ಫೀಯನ್ನೂ ತಪಶೀಲಾಗಿ ತಿಳಿಯುವಂತೆ ಕರಾರುವಾಕಾ ಲೆಕ್ಕವನ್ನೂ ಇಡಬೇಕು. ಸದರೀ ಲೆಕ್ಕವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಅಧಿಕಾರಿಗಳು ಅಪೇಕ್ಷಿಸಿದಾಗ ತನಿಖೆಗೆ ಹಾಜರ್ಪಡಿಸಬೇಕು.

9. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೆ ಆಗಲಿ ಯಾ ಅವನ ಕಡೆ ನವುಕರನೆ ಆಗಲಿ ವಿರೋಧವಾಗಿ ನಡದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡುತ್ತೆ.

ಷೆಡ್ಯೂಲ್.

		ರೂ.	ಆ.	ಪೈ.			ರೂ.	ಆ.	ಪೈ.
1. ಭರ್ತಿಗಾಡಿ	ಪ್ರತಿಯೊಂದಕ್ಕೆ	0	1	0	5. ತಲೆ ಹೊರೆ	ಪ್ರತಿಯೊಂದಕ್ಕೆ	0	0	1
2. ಖಾಲಿ ಗಾಡಿ	ಡಿಟೋ	0	0	3	6. ಖಾಲಿ, ಎತ್ತು, ಹಸ, ಯಮ್ಮೆ, ಕೋಣ, ಕುದುರೆ	ಡಿಟೋ	0	0	3
3. ಎತ್ತು, ಹಸ, ಯಮ್ಮೆ, ಕೋಣ ಮತ್ತು ಕುದುರೆ ಹೊರೆ	ಡಿಟೋ	0	0	6	7. ಆಡು ಅಥವಾ ಮೇಕೆ	ಡಿಟೋ	0	0	1
4. ಕತ್ತೆ ಹೊರೆ	ಡಿಟೋ	0	0	3					

ಎಂ. ನಾರಾಯಣರಾವ್,
ಮ್ಯುನಿಸಿಪಲ್ ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಇನ್ಸ್ಟಾಲ್ಮೆಂಟ್ ಹಾರ್.

ತಾರೀಖು 20ನೇ ಮೇ 1903ನೇ ಇಸವಿ ಚಿತ್ರದುರ್ಗ.

ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ವಿವರಿಸಿ ಇರುವ ರಿಜಿಸ್ಟ್ರೀಯ ದಸ್ತೈವಜುಗಳು 2 ವರುಷಗಳಿಗೆ ಮೇಲ್ಪಟ್ಟು ಮಾರ್ಜಿನ್ನಲ್ಲಿ ಬರದಿರುವ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ವಾರಸದಾರ್ರು ಹಾಜರಾಗಿ ವಾಪಸು ಪಡಿಯದೆ ನಿಂತಿರುತ್ತವೆ. ಈ ತಾರೀಖು ಲಾಗಾಯಿತು ಒಂದು ತಿಂಗಳುವಳಗಾಗಿ ಸದರಿ ದಸ್ತೈವಜು ಹಾಜರ್ಮಾಡಿದವರಾಗಲಿ ಅಥವಾ ಅವರ ಪ್ರತಿನಿಧಿಗಳಾಗಲಿ

ಯಾ ದಸ್ತೈವಜುಗಳಿಗೆ ಬಾಧ್ಯತೆ ವುಳ್ಳವರಾಗಲಿ ಸಬ್ ರಿಜಿಷ್ಟ್ರಾರ ಆಫೀಸಿನಲ್ಲಿ ಹಾಜರಾಗಿ ತಮ್ಮ ದಸ್ತೈವಜು ವಾಪಸು ಪಡಿಯಬೇಕು ತಪ್ಪಿದರೆ ರಿಜಸ್ಟ್ರೇಷ್ಟ ಆಕ್ಟು 85ನೇ ಸೆಕ್ಷನ್ ವೇರಿಗೆ ನಾಶಪಡಿಸಲ್ಪಡುತ್ತೆ.

ನಬುಕ್ಕು ಎತ್ತು ರಿಜಿಷ್ಟರ್ ನಂಬರು.	ದಸ್ತೈವಜು ಬರದು ಕೊಟ್ಟವರ ಹೆಸರು.	ಬರಿಸಿಕೊಂಡವನ ಹೆಸರು.	ದಸ್ತೈವಜು ತಾರೀಖು.	ರಿಜಿಷ್ಟ್ರಿದ ತಾರೀಖು.	ದಸ್ತೈವಜು ಸ್ವಭಾವ ಕಿಮ್ಮತ್ತು.
ಬುಕ್ಕು ನಂ. 1 ದಸ್ತೈವಜು ನಂ. 84	ನಾರಾಯಣನಾಯಿಕ.	ನಾರಣಂಮ ... ಪಾಪಣ ... ನಾರಾಯಣಸಾವಿ ..	6—8—1900	7— 8—1900	200 ರೂಪಾಯಿನ ದಾನ ಪತ್ರ
ಡಿಟೋ 86	ಡಿಟೋ ...	ಮಂಗವ್ವ ..	6— 8—1900	7— 8—1900	80 ರೂಪಾಯಿನ ಖುಲಾಸೆ ಪತ್ರ
ಡಿಟೋ 223	ರಾಘವೇಂದ್ರರಾವು...	ಅನಂತಕಟ್ಟು ...	1—11—1600	5—11—1900	200 ರೂಪಾಯಿನ ಕ್ರಯಪತ್ರ

ಬಿ. ವೆಂಕೋಬರಾವ್,
ಘಾರ್ ರಿಜಿಷ್ಟ್ರಾರ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ಯ 1902—1903ನೇ ಇಸವಿ ಮಿ|| ಅರ್ಜೀ ನಂಬರ್ 590.

ಅರ್ಜೀದಾರ ಕೊಳದಪ್ಪನ ಮಗ ಕೆಂಚಪ್ಪ ಮೈನರಾದ ಶಿಡ್ಲಘಟ್ಟದ ತಾಲ್ಲೂಕು ಜಂಗಮಕೋಟೆ ಸ್ಥಳದ ಮರಿಸಾವಪ್ಪನ ಮಗ ರುದ್ರಪ್ಪನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ರುದ್ರಪ್ಪನವರಿಗೆ ದೊಡ್ಡ ತಂದೆ ಆಗಬೇಕೆಂಬ ಹಕ್ಕಿನಮೇಲೆ ಶಿಡ್ಲಘಟ್ಟದ ತಾಲ್ಲೂಕು ಜಂಗಮಕೋಟೆ ಸ್ಥಳದ ಸರಾಫ್ ಕೊಳದಪ್ಪನ ಮಗ ಕೆಂಚಪ್ಪನವರು ಸದರೀ ಮೈನರಿನ ಆಸ್ತಿ ಕಾಪಾಡುವಹಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿಕೊಟ್ಟ್ಯು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ಯ 1903ನೇ ಇಸವಿ ಜೂ 6ನೇ ತಾರೀಖಿನಲ್ಲಿ ವೊಕರರ್ ಮಾಡಿಯಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ಯ 1903ನೇ ಇಸವಿ ಮಾರ್ಚಿ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ವೊಹರ್‌ನಿಸಿ ಸಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಪಿ. ಶಿಂಗ್ರಾಚಾರ್,
ಸಬ್ ಜಡ್ಜ್.

ಬೆಂಗಳೂರ ಗವರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ

ನೋಟಿಸ್, ಬೆಂಗಳೂರು, ತಾರೀಖು 11ನೇ ಮೇ 1903.

ಇದರಡಿ ನಮೂದು ಮಾಡಿರುವ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ:—

		ರೂ. ಆ. ಪೈ.
1.	ಕನ್ನಡ Iನೇ ರೀಡರ್	.. 0—3—0
2.	ಕನ್ನಡ Vನೇ ಲೇಖನ ಪುಸ್ತಕ	.. 0—1—0
3.	1904ನೇ ಸಾಲ್ ಸಂಸ್ಕೃತ ಲೋವರ್ ಸೆಕಂಡರಿ ಟೆಕ್ಸ್‌ಟ್	... 0—2—0
4.	ಮೈಸೂರ್ ಲ್ಯಾಂಡ್ ರೆವಿನ್ಯೂ ನಿಬಂಧನೆಗಳ ತಿದ್ದುಪಾಟು	.. 0—4—0

ಎಸ್. ಅಬ್ದುಲ್ ಹೈ, ಕ್ಯೂರೇಟರ್.

Mysore Government Central Press, Bangalore—1903.